ಕರ್ನಾಟಕ ಸರ್ಕಾರ

(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ,**

**ಹಾಸನ**

**ಸ್ಪೆಷಲ್ ಕೇಸ್ ನಂಬರ್ :: 140/2015**

ಪ್ರಾಸಾ- 20 ಚಾಸಾ- 26

| | | |
|---|---|---|
| ಸಾಕ್ಷಿದಾರರ ಹೆಸರುಃ | ಃ | ವಿ ರಾಮಶೇಷ್ |
| ತಂದೆಯ ಹೆಸರುಃ | ಃ | ಆರ್.ವೆಂಕಟಕೃಷ್ಣ |
| ವಯಸ್ಸುಃ | ಃ | 65 ವರ್ಷ |
| ಉದ್ಯೋಗಃ | ಃ | ನಿವೃತ್ತ ಉಪನಿರ್ದೇಶಕರು, ಸಾಂಖಿಕ, ಕರ್ನಾಟಕ ಲೋಕಾಯುಕ್ತ |
| ವಾಸಃ | ಃ | ಬೆಂಗಳೂರು |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕಃ 18-07-2024**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ದಿನಾಂಕ 01.08.2014 ರಿಂದ 31.05.2015 ರವರೆಗೆ ಉಪನಿರ್ದೇಶಕರು, ಸಾಂಖಿಕ, ಕರ್ನಾಟಕ ಲೋಕಾಯುಕ್ತದಲ್ಲಿ ಕೆಲಸ ಮಾಡಿರುತ್ತೇನೆ.

2. ಸಿ.ಆರ್. ಮಂಜುನಾಥ್ ಆಫೀಸ್ ಸೂಪರಿಂಟೆಂಡೆಂಟ್, ಚಾಮರಾಜೇಂದ್ರ ಆಸ್ಪತ್ರೆ, ಹಾಸನ ಇವರ ಕಾಣಲಾಗದ ಹಾಗೂ ಪರಿಶೀಲಿಸಲಾಗದ (invisible and non-verifyable) ಆಹಾರ ಮತ್ತು ಆಹಾರೇತರ ವೆಚ್ಚವನ್ನು ಒದಗಿಸಿರುತ್ತೇನೆ. ಎಸ್.ಪಿ. ಕರ್ನಾಟಕ ಲೋಕಾಯುಕ್ತ ಹಾಸನರವರು ಎಡಿಜಿಪಿ ಲೋಕಾಯುಕ್ತರವರಿಗೆ ನೀಡಿದ ರೆಫರೆನ್ಸ್ ಮತ್ತು ಲೆಟರ್ ನ್ನು ನೋಡುತ್ತಿದ್ದು ಲೆಟರ್ ನ್ನು ನಿಪಿ-108 ಎಂದು ಗುರುತಿಸಲಾಯಿತು. ದಿನಾಂಕ 03.12.2014 ರಲ್ಲಿ ನಾನು ಮೇಲೆ ಹೇಳಿದ ಮಾಹಿತಿಯನ್ನು ಒದಗಿಸಿರುತ್ತೇನೆ. ಸದರಿ

ಮಾಹಿತಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-109 ಎಂದು ನನ್ನ ಸಹಿಗಳನ್ನು ನಿಪಿ.109(ಎ) ರಿಂದ ನಿಪಿ-109(ಸಿ) ಎಂದು ಗುರುತಿಸಲಾಯಿತು. ಸಿ.ಆರ್.ಮಂಜುನಾಥ್ (ಆರೋಪಿ) ರವರ 09.05.1984 ರಿಂದ 25.07.2013 ರವರೆಗೆ ಅವರಿಗೆ ತಗಲಿದ ಆಹಾರ ಮತ್ತು ಆಹಾರೇತರ ವೆಚ್ಚ ಒಟ್ಟು 11,52,906/- ಆಗಿದ್ದು ಅದೇ ಪ್ರಕಾರ ಮಾಹಿತಿಯನ್ನು ಕೊಟ್ಟಿದ್ದೇನೆ.

**<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಸಿ.ಎನ್.ವಿ. ವಕೀಲರ ಪರವಾಗಿ ಶ್ರೀ ಎನ್.ಆರ್.ಆರ್ ವಕೀಲರಿಂದಃ-</u>**

ನನಗೆ ಲೋಕಾಯುಕ್ತ ಕಛೇರಿಯಿಂದ ಸಿ.ಆರ್.ಮಂಜುನಾಥ್ ರವರಿಗೆ ಸಂಬಂಧಪಟ್ಟಂತೆ ಆಹಾರ ಮತ್ತು ಆಹಾರೇತರ ಖರ್ಚು ವೆಚ್ಚಗಳನ್ನು ನೀಡಬೇಕೆಂದು ಪತ್ರ ಬಂದಿರಲಿಲ್ಲ ಎಂದರೆ ಸುಳ್ಳು. ನಾವು ಸಾಮಾನ್ಯ ಸರ್ವೆಯ ಆಧಾರದ ಮೇಲಿನ ಮಾಹಿತಿಯನ್ನು ಕೊಟ್ಟಿದ್ದೇವೆ. ಅವರ ಮನೆಗೆ ಭೇಟಿ ಕೊಟ್ಟು ಮಾಡಿರುವುದಿಲ್ಲ. ಆಹಾರ ಪದಾರ್ಥಗಳ ಬೆಲೆ ಹೆಚ್ಚು ಕಡಿಮೆ ಆಗುತ್ತದೆ ಎನ್ನುವುದು ನಿಜ. ಬಾಡಿಗೆ ಮನೆ ಬದಲಾಯಿಸಿದಾಗ ಒಂದು ಮನೆಯಿಂದ ಇನ್ನೊಂದು ಮನೆಯ ಬಾಡಿಗೆಯಲ್ಲಿ ವ್ಯತ್ಯಾಸವಾಗುತ್ತದೆ ಎನ್ನುವುದು ನಿಜ. ಸಾಮಾನ್ಯ ಬಟ್ಟೆಗೂ ಬ್ರ್ಯಾಂಡೆಡ್ ಬಟ್ಟೆಗೂ ವ್ಯತ್ಯಾಸ ಇರುತ್ತದೆ ಎನ್ನುವುದು ನಿಜ. 09.05.1984 ರಿಂದ 25.07.2013 ರವರೆಗೆ ಸಿ.ಆರ್.ಮಂಜುನಾಥ್‌ರವರಿಗೆ ತಗಲಿದ ಆಹಾರ ಮತ್ತು ಆಹಾರೇತರ ವೆಚ್ಚ ಒಟ್ಟು 11,52,906/- ಆಗಿದೆ ಎಂದು ಲೋಕಾಯುಕ್ತ ಪೊಲೀಸರ ಮಾತುಕೇಳಿ ಸುಳ್ಳು ಮಾಹಿತಿ ನೀಡಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ</u>** ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ**
**ಸ್ಪೆಷಲ್ ನ್ಯಾಯಾಧೀಶರು, ಹಾಸನ.**